ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,

ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು -560023.

ದೂರವಾಣಿ ಸಂ:080-29603636 ಇ-ಮೇಲ್: spmbeckar@gmail.com

ಸಂ: ಡಿ.ಹೆಚ್.ಎಸ್/ಬಿ.ಇ.ಸಿ/07/2021-22 ದಿನಾಂಕ:23.06.2021

**ಅಧಿಕೃತ ಜ್ಞಾಪನ ಪತ್ರ**

**ವಿಷಯ:** ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಎಂ.ಬಿ.ಬಿ.ಎಸ್, ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 10 ಟಿಇಸಿ 2006, ದಿನಾಂಕ 28.02.2006.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ: ಆಕುಕ 363 ಹೆಚ್ಎಸ್ಹೆಚ್ 2021, ದಿನಾಂಕ 19.05.2021.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದ್ ವೃತ್ತ, ಬೆಂಗಳೂರು ಇವರ ಪತ್ರ ಸಂಖ್ಯೆ ದಿನಾಂಕ 03.06.2021.
4. ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 08.06.2021, ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ 17.06.2021.

*******

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದಡಿ ಆಯ್ಕೆ ಹೊಂದಿ ಎಂ.ಬಿ.ಬಿ.ಎಸ್ ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳು ಉಲ್ಲೇಖ(1)ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 10 ಟಿಇಸಿ 2006, ದಿನಾಂಕ 28.02.2006 ರ ನಿಯಮ 11 ಪ್ರಕಾರ ಹಾಗೂ ಸರ್ಕಾರದ ಅಧಿಸೂಚನೆ 1 - 1 ಸಂಖ್ಯೆ ಆಕುಕ 79 ಆರ್‌ಜಿಯು 2011, ದಿನಾಂಕ 17.07.2012 ರಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸುವುದಾಗಿ ಅಥವಾ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸದೇ ಇದ್ದ ಪಕ್ಷದಲ್ಲಿ ರೂ 10 ಲಕ್ಷ (ರೂ ಹತ್ತು ಲಕ್ಷಗಳು ಮಾತ್ರ) ದಂಡ ಪಾವತಿಸುವುದಾಗಿ ಬಂಧಪತ್ರ ನೀಡಿರುತ್ತಾರೆ.

ಉಲ್ಲೇಖ(2)ರಲ್ಲಿ ಕಡ್ಡಾಯ ಸೇವೆ ನೀಡುವ ಬಗ್ಗೆ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳನ್ವಯ ಬಂಧಪತ್ರ ನೀಡಿರುವ ವಿದ್ಯಾರ್ಥಿಗಳಿಗೆ ಸಮಾಲೋಚನೆ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಬಾಂಡ್ ಎನ್‌ಫೋರ್ಸ್‌ಮೆಂಟ್ ಸಮಿತಿ ಸಭೆಯಲ್ಲಿ ನಿರ್ಣಯಿಸಿದ್ದು, ಅದರಂತೆ ಉಲ್ಲೇಖ(3)ರಲ್ಲಿ ಖಾಲಿ ಹುದ್ದೆಗಳ ಮಾಹಿತಿಯನ್ನು ನೀಡಿದ್ದು, ಸರ್ಕಾರಿ ಕೋಟಾದಡಿಯಲ್ಲಿ ದಾಖಲಾತಿ ಹೊಂದಿರುವ ಅಭ್ಯರ್ಥಿಗಳಿಗೆ ಸಮಾಲೋಚನೆ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಉಲ್ಲೇಖ(4)ರ ಅಧಿಸೂಚನೆಯಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿದೆ.

2015ನೇ ಸಾಲಿನಲ್ಲಿ ದಾಖಲಾತಿ ಹೊಂದಿದ ವೈದ್ಯಕೀಯ ವಿದ್ಯಾರ್ಥಿಗಳು ವ್ಯಾಸಂಗವನ್ನು ಪೂರ್ಣಗೊಳಿಸಿರುವ ವೈದ್ಯರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರನ್ವಯ ಖಾಲಿ ಹುದ್ದೆಗಳನ್ನು ಪ್ರಕಟಿಸಿದ್ದು, ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಳ್ಳಲು ಆನ್‌ಲೈನ್ ಮೂಲಕ ಅಭ್ಯರ್ಥಿಗಳಿಗೆ ಅನುಕೂಲವಾಗುವ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಅದರಂತೆ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿರುವ ಸ್ಥಳಕ್ಕೆ ಒಂದು ವರ್ಷದ ಅವಧಿಯ ಕಡ್ಡಾಯ ಸೇವೆಗೆ ನೇಮಿಸಿ ನಿಯುಕ್ತಿಗೊಳಿಸಿರುವ ಪಟ್ಟಿಯನ್ನು ಈ ಪತ್ರದೊಂದಿಗೆ ಅನುಬಂಧದಲ್ಲಿ ಲಗತ್ತಿಸಿದೆ.

ಅ) ನಿಯುಕ್ತಿಗೊಂಡಿರುವ ವೈದ್ಯರುಗಳಿಗೆ ಈ ಕೆಳಕಂಡ ಷರತ್ತುಗಳು ಒಳಪಟ್ಟಿರುತ್ತದೆ.

1. ಈ ಸ್ಥಳ ನಿಯುಕ್ತಿಯನ್ನು ಮೇಲೆ ಉಲ್ಲೇಖಿಸಿದಂತೆ ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಮಾಡಲಾಗಿದ್ದು, ಯಾವುದೇ ಕಾರಣಕ್ಕೂ ಇದನ್ನೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಮಾಡಲಾದ ಖಾಯಂ ನೇಮಕಾತಿಯೆಂದು ಭಾವಿಸತಕ್ಕದ್ದಲ್ಲ. ಮುಂದುವರೆದು, ಈ ನೇಮಕಾತಿಯು ಯಾವುದೇ ರೂಪದಲ್ಲಿಯೂ ಸಂಬಂಧಿಸಿದ ಅಭ್ಯರ್ಥಿಗೆ, ಇಲಾಖೆಯಲ್ಲಿ ಖಾಯಂ ಆಗಿ ನೇಮಕಗೊಳ್ಳುವಂತಹ ಹಕ್ಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.
2. ನಿಯುಕ್ತಿಗೊಂಡಿರುವ ಅವಧಿಯು, ಈ ಆದೇಶದನ್ವಯ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಇರುತ್ತದೆ.
3. ಒಂದು ವರ್ಷದ ನಿಯುಕ್ತಿಯ ಅವಧಿಯಲ್ಲಿ, ವೈದ್ಯರು ಗೈರು ಹಾಜರಾದಲ್ಲಿ ಅಥವಾ ಯಾವುದೇ ಅವಧಿಗೆ ವೇತನ ರಹಿತ ರಜೆಯನ್ನು ಪಡೆದುಕೊಂಡಲ್ಲಿ ಆ ಪ್ರಮಾಣದ ಅವಧಿಗೆ ಸದರಿಯವರ ನಿಯುಕ್ತಿ ಅವಧಿಯು ಸ್ವಯಂಚಾಲಿತವಾಗಿ ಮುಂದುವರಿಯಲ್ಪಡುತ್ತದೆ
4. ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ಅವರು ಆಯ್ಕೆ ಮಾಡಿಕೊಂಡಿರುವ ಸ್ಥಳದನ್ವಯ ಈ ಕೆಳಕಂಡಂತೆ ಆಯಾ ಸಂಬಂಧಪಟ್ಟ ಸಂಸ್ಥೆಯವರು ವೇತನವನ್ನು ಪಾವತಿಸುವರು.
   a) ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಅಡಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳಲ್ಲಿ ವೇತನ ಪಾವತಿಸುವ ಮಾರ್ಗಸೂಚಿಗಳನ್ವಯ ಮಾಸಿಕ ಸಂಭಾವನೆ ನೀಡುವುದು.
   b) ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿರುವ ಐಸಿಯು ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿರುವ ಹುದ್ದೆಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಗಳನ್ವಯ ಮಾಸಿಕ ಸಂಭಾವನೆ ನೀಡುವುದು.
   c) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಲ್ಲಿ ಮಂಜೂರಾಗಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿರುವ ಹುದ್ದೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಆಕುಕ 663 ಹೆಚ್‌ಎಸ್‌ಹೆಚ್ 2020, ದಿನಾಂಕ 06.05.2021ರನ್ವಯ ಮಾಸಿಕ ಸಂಭಾವನೆ ನೀಡುವುದು.
5. ಸರ್ಕಾರದ ಕರ್ತವ್ಯವನ್ನು ನಿರ್ವಹಿಸಲು ಪ್ರಯಾಣಿಸಿದಾಗ, ಕೆ.ಸಿ.ಎಸ್.ಆರ್ ನಿಯಮಗಳನುಸಾರ ಪ್ರಯಾಣ ಭತ್ಯೆಗೆ ಅರ್ಹರಾಗುವರು. ಆದಾಗ್ಯೂ, ಈ ಆದೇಶಾನುಸಾರ ಪ್ರಥಮ ಬಾರಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸ್ವ-ಸ್ಥಳದಿಂದ ಮಾಡುವ ಪ್ರಯಾಣಕ್ಕೆ ಯಾವುದೇ ಪ್ರಯಾಣ ಭತ್ಯೆಗೆ ಅರ್ಹರಾಗುವುದಿಲ್ಲ.
6. ಸದರಿ ವೈದ್ಯರು, ತಮಗೆ ಸ್ಥಳ ನಿಯುಕ್ತಿಗೊಳಿಸಲಾದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಧಿಕೃತ ಕೆಲಸದ ಸಮಯದಲ್ಲಿ ಆಡಳಿತ ವೈದ್ಯಾಧಿಕಾರಿಗಳ ಸಲಹೆ:ಮಾರ್ಗದರ್ಶನದ ಮೇರೆಗೆ ಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ವೈದ್ಯರು ಯಾವುದೇ ಮೆಡಿಕೋ-ಲೀಗಲ್ (Medico Legal) ಪ್ರಕರಣಗಳನ್ನು ನಿರ್ವಹಿಸತಕ್ಕದ್ದಲ್ಲ. ಮಿಕ್ಕಂತೆ, ತಮಗೆ ನೇಮಿಸಲಾದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಪ್ರಕರಣಗಳ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು
7. ನಿಯುಕ್ತಿ ಅವಧಿಯಲ್ಲಿ, ಸದರಿ ವೈದ್ಯರು, ಪೂರ್ಣಗೊಳಿಸಿದ ಪ್ರತಿ ಒಂದು ತಿಂಗಳ ಅವಧಿ ಸೇವೆಗೆ ಒಂದು ದಿನದ ಸಾಂದರ್ಭಿಕ ರಜೆ ಪಡೆಯಲು ಅರ್ಹರಿರುತ್ತಾರೆ.
8. ನಿಯುಕ್ತಿ ಅವಧಿಯಲ್ಲಿ ಸದರಿ ವೈದ್ಯರು ಕರ್ನಾಟಕ ಸಿವಿಲ್ ಸೇವೆ (ನಡತೆ) ನಿಯಮಗಳ 1966 ರ ನಿಯಮ 3 ರ ಈ ಕೆಳಕಂಡ ಅವಕಾಶಗಳಿಗೆ ಬದ್ಧರಾಗಿರತಕ್ಕದ್ದು.

ಅಂದರೆ, ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಯ ವೈದ್ಯರು ಎಲ್ಲಾ ಕಾಲದಲ್ಲೂ

(1) ಸಂಪೂರ್ಣ ಸಮಗ್ರತೆ (Absolute integrity) ಯನ್ನು ಕಾಪಾಡಿಕೊಳ್ಳತಕ್ಕದ್ದು.
(2) ಕರ್ತವ್ಯ ಶ್ರದ್ಧೆಯನ್ನು ಹೊಂದಿರತಕ್ಕದ್ದು.